# ಮತಾಂಧತೆಯ ಮಾರಕರೂಪ

ಸ್ವಾಮಿ ಗೌತಮಾನಂದ

ಚೆನ್ನೈನಲ್ಲಿರುವ ಅಮೆರಿಕದ ದೂತಾವಾಸ ಪ್ರಧಾನ ಕಛೇರಿಯಲ್ಲಿ ೧೧.೦೯.೨೦೦೨ರಂದು ವಿಶ್ವವಾಣಿಜ್ಯ ಕೇಂದ್ರ ನಿರ್ಮೂಲನದ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಅದರಲ್ಲಿ ಅಮೆರಿಕದ ಪ್ರಧಾನ ಕಾನ್ಸಲರಾದ ಡಾ. ರಿಚರ್ಡ್ ಡಿ. ಹೇನೀಸ್ ಅವರು, ವಿವಿಧ ಧಾರ್ಮಿಕ ಮುಖಂಡರು ಮತ್ತು ಇನ್ನೂ ಅನೇಕ ಗಣ್ಯ ವ್ಯಕ್ತಿಗಳು ಭಾಗವಹಿಸಿದ್ದರು. ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಸ್ವಾಮಿ ಗೌತಮಾನಂದಜಿಯವರೂ ಅದರಲ್ಲಿ ಭಾಗವಹಿಸಿದ್ದರು. ಅವರು ಅಲ್ಲಿ ನೀಡಿದ ಉಪನ್ಯಾಸದ ಅನುವಾದವನ್ನು ಇಲ್ಲಿ ಕೊಟ್ಟಿದೆ.

ನ್ಯೂಯಾರ್ಕ್‌ನಲ್ಲಿ ೧೧.೦೯.೨೦೦೧ರ ಮಹಾ ಮರಣದಲ್ಲಿ ದುಃಖಕ್ಕೀಡಾದವರಿಗೆ ಸಂತಾಪ ಸೂಚಿಸುವುದಕ್ಕಾಗಿ ನಾವೆಲ್ಲರೂ ಇಲ್ಲಿ ನೆರೆದಿದ್ದೇವೆ. ಭಯೋತ್ಪಾದನೆ ಮತ್ತು ಅದರಿಂದಾಗಿ ನಮ್ಮ ಜೀವನದಲ್ಲಿ ಉಂಟಾಗಿರುವ ಬದಲಾವಣೆ—ಈ ಕುರಿತಾಗಿ ಶಿಕ್ಷಿತ ಭಾರತೀಯರ ಭಾವನೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಅದಕ್ಕೆ ಮುಂಚೆ ಅಮೆರಿಕದ ನೆಲದಲ್ಲೇ, ಸೆಪ್ಟೆಂಬರ್ ೧೧ ರಂದೇ ಜರುಗಿದ ಇನ್ನೊಂದು ಚಾರಿತ್ರಿಕ ಮಹಾಘಟನೆಯನ್ನು ನಿಮಗೆ ತಿಳಿಸಲು ಇಷ್ಟಪಡುತ್ತೇನೆ. ಅದಾವುದೆಂದರೆ ೧೮೯೩ರಲ್ಲಿ ಚಿಕಾಗೊದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಭಾಗವಹಿಸಿದುದು. ಈ ಐತಿಹಾಸಿಕ ಮಹಾ ಸಮ್ಮೇಳನದಲ್ಲಿ ಸೆಪ್ಟೆಂಬರ್ ೧೧ರಂದು ಸ್ವಾಮಿ ವಿವೇಕಾನಂದರು ಪರಧರ್ಮಸಹಿಷ್ಣುತೆ ಮತ್ತು ಸಾರ್ವತ್ರಿಕ ಸ್ವೀಕಾರವನ್ನು ಕುರಿತು ಮಾತನಾಡಿದರು. ಅಂದು ಅವರು ಹೇಳಿದರು: "ಪರಧರ್ಮ ಸಹಿಷ್ಣುತೆಯಲ್ಲಿ ನಮಗೆ ನಂಬಿಕೆಯಿದೆ, ಅಷ್ಟೇ ಅಲ್ಲ, ಎಲ್ಲ ಧರ್ಮಗಳೂ ಸತ್ಯ ಎಂಬುದನ್ನು ನಾವು ಒಪ್ಪುತ್ತೇವೆ." ಸಾವಿರಾರು ವರ್ಷಗಳ ಹಿಂದೆ ರಚಿತವಾದ ಶಿವ ಮಹಿಮ್ನಃ ಸ್ತೋತ್ರದ ಒಂದು ಶ್ಲೋಕವನ್ನು ಅವರು ಉಲ್ಲೇಖಿಸಿದರು: "ಬೇರೆ ಬೇರೆ ಕಡೆಗಳಲ್ಲಿ ಹುಟ್ಟಿದ ನದಿಗಳು ಕೊನೆಗೆ ಸಾಗರದಲ್ಲಿ ಸಂಗಮಗೊಳ್ಳುವಂತೆ, ಹೇ ಭಗವನ್, ಮಾನವರು ತಮ್ಮ ತಮ್ಮ ಸಂಸ್ಕಾರಗಳಿಗೆ ತಕ್ಕಂತೆ, ನೇರವಾಗಿಯೊ ವಕ್ರವಾಗಿಯೊ ಇರುವ ಪಥಗಳನ್ನು ಅನುಸರಿಸುತ್ತಾರೆ. ಅವೆಲ್ಲವೂ ನಿನ್ನೆಡೆಗೇ ಕರೆದೊಯ್ಯುತ್ತವೆ."

ಅನಂತರ ಅವರು ಈ ಕೆಳಗಿನ ಅದ್ಭುತ ಹೇಳಿಕೆಯೊಂದಿಗೆ ತಮ್ಮ ಉಪನ್ಯಾಸವನ್ನು ಮುಗಿಸಿದರು: "ಸಂಕುಚಿತ ಪಂಥಭಾವನೆ, ಸ್ವಮತಾಭಿಮಾನ, ಅದರ ಭೀಕರ ಸಂತಾನವಾದ ಮತಾಂಧತೆ ಇವು ಈ ಸುಂದರ ಪೃಥ್ವಿಯನ್ನು ಬಹುಕಾಲದಿಂದ ಬಾಧಿಸುತ್ತಿವೆ. ಇವು ಈ ಭೂಮಿಯನ್ನು ಹಿಂಸೆಯಿಂದ ತುಂಬಿವೆ, ಅದನ್ನು ಮತ್ತೆ ಮತ್ತೆ ನರರಕ್ತದಿಂದ ತೋಯಿಸಿವೆ, ನಾಗರಿಕತೆಯನ್ನು ನಾಶಗೊಳಿಸಿವೆ, ರಾಷ್ಟ್ರರಾಷ್ಟ್ರಗಳನ್ನೇ ನಿರಾಶೆಯ ಕೂಪಕ್ಕೆ ತಳ್ಳಿವೆ. ಇಂಥ ಭಯಂಕರ ಧರ್ಮಾಂಧತೆಯ ರಾಕ್ಷಸರು ಇಲ್ಲದೆ ಇದ್ದಿದ್ದರೆ ಮಾನವ ಸಮಾಜ ಈಗಿರುವುದಕ್ಕಿಂತಲೂ ಎಷ್ಟೊ ಪಾಲು ಮುಂದುವರಿದಿರುತ್ತಿತ್ತು. ಆದರೆ ಅವರ ಕಾಲ ಮುಗಿದಿದೆ. ಇಂದು ಬೆಳಗ್ಗೆ ಈ ಸಭೆಯ ಶುಭಾರಂಭವನ್ನು ಸೂಚಿಸಲು ಮೊಳಗಿದ ಘಂಟಾನಾದ ಎಲ್ಲ ಮತಾಂಧತೆಯ, ಖಡ್ಗ ಇಲ್ಲವೆ ಲೇಖನಿಯಿಂದ ಸಾಧಿಸಿದ ಮತೀಯ ಹಿಂಸೆಗಳ, ಒಂದೇ ಗುರಿಯೆಡೆಗೆ ಸಾಗುತ್ತಿದ್ದರೂ ಪಥಿಕರಲ್ಲಿ ತಲೆದೋರುತ್ತಿರುವ ಅನುದಾರವಾದ ಎಲ್ಲ ಮನಸ್ತಾಪಗಳ ಅಂತ್ಯಕ್ರಿಯೆಯನ್ನು ಸೂಚಿಸುವ ಘಂಟಾನಾದವೂ ಆಗಲಿ ಎಂಬುದೇ ನನ್ನ ಕಳಕಳಿಯ ಆಶಯ."

೧೧.೦೯.೨೦೦೧ರಂದು ಸಂಭವಿಸಿದ ದುರಂತದ ಹಿಂದೆ ಕೆಲಸ ಮಾಡಿದ ಎಲ್ಲ ವಿಚಾರಗಳ ಸಮರ್ಪಕ ಅರಿವು ನಮಗಿನ್ನೂ ಉಂಟಾಗಿಲ್ಲ ಎಂಬುದು ನಿಜವಾದರೂ, ನಮ್ಮ ಧಾರ್ಮಿಕ ಆದರ್ಶವೊಂದೇ ಸತ್ಯ ಮತ್ತು ಅನುಸರಿಸಲು ಯೋಗ್ಯ, ಉಳಿದ ಎಲ್ಲ ಧಾರ್ಮಿಕ ಆದರ್ಶಗಳೂ ಅಯೋಗ್ಯ ಎಂಬ ತೀವ್ರ ಮತಾಂಧತೆಯೇ ಇಂತಹ ಅಮಾನುಷ ಕೃತ್ಯಕ್ಕೆ ಕಾರಣ ಎಂಬುದಂತೂ ನಿಜ. ಮುಂದೆ ನಡೆದ ಘಟನೆಗಳು ಸೂಚಿಸುವುದೇನೆಂದರೆ ಈ ಮತೀಯ ಭಾವನೆಯನ್ನು ಯುವಕರ ಮನಸ್ಸಿಗೆ ತುಂಬಿಸಿ ಅವರನ್ನು ಭಯೋತ್ಪಾದನೆಯ ಕ್ರಿಯೆಯಲ್ಲಿ ತೊಡಗಿಸಲಾಗುತ್ತದೆ ಎಂಬುದು. ಮತಾಂಧತೆಯು ವಿಚಾರವನ್ನು ನಾಶಗೊಳಿಸುತ್ತದೆ, ಮತೀಯ ಭಾವನೆಗಳಿಗೆ ವಶರಾದವರು ಯಂತ್ರಮಾನವರಂತೆ, ಪ್ರಾಣಿಗಳಂತೆ ವರ್ತಿಸುತ್ತಾರೆ. ಭಯೋತ್ಪಾದನೆಯ ಯಂತ್ರಕ್ಕೆ ಚಾಲನೆಯನ್ನು ಕೊಡುವ ಇಂಧನವೇ ಮತಾಂಧತೆ.

ಆಧ್ಯಾತ್ಮಿಕ ಆಹಾರ ಜನರಿಗೆ ದೊರೆಯದಿದ್ದಾಗ ಈ

ಮತಾಂಧತೆಯು ಜನಜೀವನವನ್ನು ಆಕ್ರಮಿಸಿಕೊಂಡುಬಿಡುತ್ತದೆ. ಆಧ್ಯಾತ್ಮಿಕ ಆಹಾರ ಯಾವುದು? ಯಾವ ಸಾಧನೆ ಅಥವಾ ಮೌಲ್ಯಗಳಿಂದ ವ್ಯಕ್ತಿಗಳು ವಿಶ್ವದೊಡನೆಯೂ ಭಗವಂತನೊಡನೆಯೂ ತಾವು ಒಂದು ಎಂಬ ಸಾಕ್ಷಾತ್ಕಾರವನ್ನು ಪಡೆದು ಮಾನವಕೋಟಿಯನ್ನೂ ಭಗವಂತನನ್ನೂ ಪ್ರೀತಿಸುತ್ತಾರೆಯೋ ಅದೇ ನಿಜವಾದ ಆಧ್ಯಾತ್ಮಿಕ ಆಹಾರ. ಅತ್ಯಂತ ಪುರಾತನ ಶಾಸ್ತ್ರವಾದ ವೇದಗಳು, **ಸರ್ವಂ ಖಲ್ವಿದಂ ಬ್ರಹ್ಮ**—"ಈ ಎಲ್ಲ ಸೃಷ್ಟಿಯೂ ದೇವರೇ"—ಎಂದು ಸಾರುತ್ತವೆ. ಪ್ರತಿಯೊಂದು ಜೀವಿಯಲ್ಲಿಯೂ ದಿವ್ಯತೆ ಅದರ ಮೂಲಭೂತ ಸ್ವರೂಪವಾಗಿ ಅಡಗಿದೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಅಮೆರಿಕದ ತಮ್ಮ ಅನೇಕ ಉಪನ್ಯಾಸಗಳಲ್ಲಿ ಮಾನವನ ದಿವ್ಯತೆಯನ್ನು ಸಾರಿ ಹೇಳಿದರು. "ನೀವೆಲ್ಲರೂ ದಿವ್ಯಾತ್ಮರು. ಪಾಪಿಗಳು ಎಂದು ಮಾನವನನ್ನು ಕರೆಯುವುದೇ ಘೋರ ಪಾತಕ, ಮಾನವ ಸ್ವಭಾವಕ್ಕೆ ಬಗೆಯುವ ಮಹಾದ್ರೋಹ" ಎಂದು ಅವರು ಗುಡುಗಿದರು.

ಮಾನವನ ದಿವ್ಯತೆಯ ಭಾವನೆಯನ್ನು ವಿಸ್ತೃತವಾಗಿ, ಶಾಲೆ ಕಾಲೇಜುಗಳಲ್ಲಿ ಮಾತ್ರವಲ್ಲದೆ, ಚರ್ಚು ಮಸೀದಿ ದೇವಾಲಯ ಬೌದ್ಧವಿಹಾರ ಮುಂತಾದ ಪೂಜಾಸ್ಥಳಗಳಲ್ಲಿಯೂ ಬೋಧಿಸಿದ್ದೇ ಆದರೆ ಜನರು ಉನ್ನತ ಗೌರವಕ್ಕೆ ಪಾತ್ರರಾಗುತ್ತಾರೆ. ಆಗ ಯಾವುದೇ ಕಾರಣಕ್ಕಾದರೂ ಇತರರನ್ನು ನೋಯಿಸುವ ಭಾವನೆ ಅತ್ಯಂತ ಜಿಗುಪ್ಸಾದಾಯಕವಾಗುತ್ತದೆ. ಆಗಲೇ ಸಮಾಜದಿಂದ ಹಿಂಸಾತ್ಮಕತೆಯ ಮೂಲೋತ್ಪಾಟನವಾಗುತ್ತದೆ.

ವಿಜ್ಞಾನ ಮತ್ತು ತಾಂತ್ರಿಕತೆಯ ಅತ್ಯುತ್ತಮ ಶಿಕ್ಷಣ ನಮಗೆ ದೊರೆಯುತ್ತಿದ್ದರೂ ಇತರರನ್ನು ಪ್ರೀತಿ ಗೌರವದಿಂದ ಕಾಣುವ ಪ್ರವೃತ್ತಿ ನಮ್ಮಲ್ಲಿ ಇಲ್ಲವಾಗಿದೆ. ಇದರಿಂದಾಗಿಯೇ ವಿಜ್ಞಾನಿಗಳು, ರಾಜಕಾರಣಿಗಳು ಅಣ್ವಸ್ತ್ರಗಳನ್ನೂ ಜೈವಿಕಾಸ್ತ್ರಗಳನ್ನೂ ತಯಾರಿಸುತ್ತಾರೆ. ಕೊನೆಗೆ ಎಲ್ಲ ಮಾನವೀಯ ಕಳಕಳಿಯನ್ನೂ ನಾಶಮಾಡುತ್ತಾರೆ. ಅಂತಹ ವ್ಯಕ್ತಿಗಳು ಹಿಟ್ಲರ್ ಮಾಡಿದಂತೆ ಮತ್ತು ಸೆಪ್ಟೆಂಬರ್ ೧೧ರ ದುರಂತದಂತೆ ಸಹಮಾನವರ ಸಂಪೂರ್ಣನಾಶದಲ್ಲಿ ತೊಡಗುವುದರಲ್ಲಿ ಆಶ್ಚರ್ಯವೇನಿದೆ? ಸೆಪ್ಟೆಂಬರ್ ೧೧ರ ಭಯೋತ್ಪಾದನೆಯು ನನ್ನಂತಹ ಚಿಂತಕರ ಮನಸ್ಸಿನ ಮೇಲೆ ಉಂಟುಮಾಡಿದ ಪರಿಣಾಮ ಇದು.

ಜಿಹಾದ್ ಅಥವಾ ಧರ್ಮಯುದ್ಧದ ಹೆಸರಿನಲ್ಲಿ ಬುದ್ಧಿ ಕೆಡಿಸುವ ಆದರ್ಶಗಳಿಗೆ ಜನರು ಬಲಿಯಾಗದಂತೆ ತುರ್ತಾಗಿ ಅವರಿಗೆ ಶಿಕ್ಷಣ ನೀಡುವ ಅಗತ್ಯತೆಯ ಅರಿವು ನಮ್ಮಲ್ಲಿ ಈಗ ಉಂಟಾಗುತ್ತಿದೆ. ಮುಗ್ಧರನ್ನು ಸಾಯಿಸುವುದು ಧರ್ಮವಲ್ಲ, ಅದು ರಾಕ್ಷಸೀ ನರ್ತನ.

ಮತಾಂಧತೆಯ ತರಬೇತಿ ಕೇಂದ್ರಗಳಿಗೆ ಸೇರುವ ವ್ಯಕ್ತಿಗಳು ಸಾಮಾನ್ಯವಾಗಿ ಬಡವರು ಮತ್ತು ಪರಿತ್ಯಕ್ತರು. ತಮ್ಮ ಮತಕ್ಕೆ ಸೇರಿದವರನ್ನು ಬಿಟ್ಟು, ಇತರ ಮತದವರನ್ನು ಕೊಲ್ಲುವುದರಿಂದ ಸ್ವರ್ಗಸುಖವನ್ನು ಅನುಭವಿಸಬಹುದೆಂದು ಅವರಿಗೆ ಬೋಧಿಸಲಾಗುತ್ತದೆ. ಎಲ್ಲಿ ಪ್ರಜಾಪ್ರಭುತ್ವ ಆಳ್ವಿಕೆ ಇಲ್ಲವೊ, ಎಲ್ಲಿ ಸ್ವಾರ್ಥ ರಾಜಕಾರಣಿಗಳು ಜನರನ್ನು ಮೂಗುದಾರ ಹಿಡಿದು ಎಳೆಯುತ್ತಾರೆಯೊ ಅಂತಹ ಪ್ರದೇಶಗಳಲ್ಲಿ ಇಂತಹ ಹೀನ ಕೃತ್ಯಗಳು ಹುಲುಸಾಗಿ ಬೆಳೆಯುತ್ತವೆ. ಇಂತಹ ಪ್ರಜಾಪ್ರಭುತ್ವ ವಿರೋಧಿ ಆಳ್ವಿಕೆಗೆ ಮತ್ತು ಹುಸಿ ಪ್ರಜಾಪ್ರಭುತ್ವಕ್ಕೆ ಸಹಾಯ ನೀಡುವುದನ್ನು ನಾವು ನಿಲ್ಲಿಸಬೇಕು. ಜನರಿಗೆ ನಾವು ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಗಳೆರಡನ್ನೂ ನೀಡಬೇಕು. ಇದರಿಂದ ಜನರು ದಕ್ಷರಾಗುವುದು ಮಾತ್ರವಲ್ಲದೆ ಒಳ್ಳೆಯವರೂ ಆಗುತ್ತಾರೆ. ಒಳ್ಳೆಯತನದ ಲಕ್ಷಣಗಳು ಇವು: ಸತ್ಯಸಂಧತೆ, ಮಾನವಭ್ರಾತೃತ್ವ, ದುರ್ಬಲರಿಗೆ ಸೇವೆ ಸಲ್ಲಿಸುವುದು, ಇಡೀ ಮಾನವ ಕೋಟಿ ಒಂದು ದಿವ್ಯ ಕುಟುಂಬ ಎಂಬ ದೃಢ ವಿಶ್ವಾಸ ಮತ್ತು ಇತರರನ್ನು ನೋಯಿಸುವುದೆಂದರೆ ನಮಗೇ ದುಃಖವನ್ನು ತಂದುಕೊಂಡಂತೆ ಎಂಬ ಆಳ ಅರಿವು. "ಭಗವಂತನೇ, ಪ್ರೀತಿ ಮತ್ತು ಭ್ರಾತೃತ್ವದ ಭಾವನೆಗಳನ್ನು ನಾವೆಲ್ಲಿರುವೆವೊ ಅಲ್ಲಿಂದ ಪಸರಿಸುವ ಇಚ್ಛೆಯನ್ನು ನಮಗೆ ದಯಪಾಲಿಸು" ಎಂಬ ಪ್ರಾರ್ಥನೆಯೊಂದಿಗೆ ನನ್ನ ಮಾತನ್ನು ನಿಲ್ಲಿಸುತ್ತೇನೆ.

✳

### ಆಶ್ರಮದ ವಿಶೇಷ ಕಾರ್ಯಕ್ರಮಗಳು

**ಅಕ್ಟೋಬರ್ 2002**

| | | |
|---|---|---|
| **1** | ಮಂಗಳವಾರ | ಸ್ವಾಮಿ ಅಭೇದಾನಂದ ಜಯಂತಿ |
| **2** | ಬುಧವಾರ | ಏಕಾದಶಿ |
| **6** | ಭಾನುವಾರ | ಸ್ವಾಮಿ ಅಖಂಡಾನಂದ ಜಯಂತಿ |
| **12** | ಶನಿವಾರ | *ದುರ್ಗಾಪೂಜಾ* ಮಹಾಸಪ್ತಮಿ |
| **13** | ಭಾನುವಾರ | ಮಹಾಷ್ಟಮಿ |
| **14** | ಸೋಮವಾರ | ಮಹಾನವಮಿ |
| **15** | ಮಂಗಳವಾರ | ವಿಜಯದಶಮಿ |
| **16** | ಬುಧವಾರ | ಏಕಾದಶಿ |

**ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.**

**ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ**